
# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI


## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 12 Reg. No. : KARBIL / 2005 / 16123 ಡಿಸೆಂಬರ್ - 2023 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 12 ಪ್ರಕಟಣೆ : 15-12-2023



## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಕುರಾಯ ಶ್ರೀ ಶಿವರಾಮ ಶಾಸ್ತ್ರೀಯವರ ಸ್ಮರಣಾರ್ಥ ಅವರ ಧರ್ಮಪತ್ನಿ ಶ್ರೀಮತಿ ಕೆ. ಎಸ್. ಕಮಲಾ, ಪುತ್ರ ಶ್ರೀ ಕೆ. ಎಸ್. ರಾಮಸ್ವಾಮಿ ಮತ್ತು ಶ್ರೀಮತಿ ಬೀಜಿ ಕೃಷ್ಣನ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **2,00,000/-** (ರೂಪಾಯಿ ಎರಡು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ನಿರ್ದೇಶಕರಾದ ಶ್ರೀ ಕೆ. ಪ್ರಭಾಕರ್ ರಾವ್, ಶ್ರೀ ಸಂತೋಷ್ ಕುಮಾರ್ ಯು. ಉಪಸ್ಥಿತರಿದ್ದರು.

ನಂದಾವರ ಶ್ರೀ ರಾಘವಯ್ಯ ಮತ್ತು ಶ್ರೀಮತಿ ಲಕ್ಷ್ಮೀ ರಾವ್ ಸ್ಮರಣಾರ್ಥ ಅವರ ಮಗ ಶ್ರೀ ಶಶಿಶೇಖರ ರಾವ್, ಸೊಸೆ ಶ್ರೀಮತಿ ಮಂಜುಳಾ ರಾವ್, ಮೊಮ್ಮಗ ಶ್ರೀ ಶಶಾಂಕ್ ರಾವ್ ಮತ್ತು ಶ್ರೀಮತಿ ಅಪೂರ್ವ ಶಶಾಂಕ್ ರಾವ್ ಇವರು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,00,000/-** (ರೂಪಾಯಿ ಒಂದು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.






ವಾಮಂಜೂರು ಶ್ರೀ ಸುಬ್ರಾಯ ರಾವ್ ಇವರ ಸ್ಮರಣಾರ್ಥ ಅವರ ಧರ್ಮಪತ್ನಿ ಶ್ರೀಮತಿ ಪ್ರಭಾವತಿ ಎಸ್. ರಾವ್, ಪುತ್ರ ಶ್ರೀ ಪ್ರವೀಣಚಂದ್ರ ಎಸ್ ರಾವ್, ಸೊಸೆ ಶ್ರೀಮತಿ ಕವಿತಾ ಪ್ರವೀಣಚಂದ್ರ ರಾವ್ ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,00,000** (ರೂಪಾಯಿ ಒಂದು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಅವರ ಮೊಮ್ಮಗಳು ಡಾ. ಮಧುರಾ ರಾವ್, ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಉಪಸ್ಥಿತರಿದ್ದರು.

ಬೆಂಗಳೂರು ನಿವಾಸಿ ಶ್ರೀಮತಿ ಸರಸ್ವತಿ ರಾವ್ ಇವರು ತಮ್ಮ ಪುತ್ರ ಪ್ರಖ್ಯಾತ ಹೈಕೋರ್ಟ್ ವಕೀಲರಾದ ಶ್ರೀ ಪ್ರಶಾಂತ್ ಬಿ. ಕೆ. ಮತ್ತು ಸೊಸೆ ಶ್ರೀಮತಿ ಪಲ್ಲವಿ ಪ್ರಶಾಂತ್ ಜತೆಗೂಡಿ ತಮ್ಮ ಪತಿ ಶ್ರೀ ಬಿ. ಕೆ. ಸೀತಾರಾಮ್ ರಾವ್ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ₹ **1,00,000/-** (ರೂಪಾಯಿ ಒಂದು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.





## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ಸಮಾಜ ಬಾಂಧವರೇ,

### ಶ್ರೀ ಸಭಾದ ವಾರ್ಷಿಕೋತ್ಸವವು

ತಾರೀಕು **24-12-2023**ನೇ ಆದಿತ್ಯವಾರದಂದು
ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### ಕಾರ್ಯಕ್ರಮಗಳು



| | |
|---|---|
| ಬೆಳಗ್ಗೆ 8-00ರಿಂದ : | ಉಪಾಹಾರ |
| ಪೂರ್ವಾಹ್ನ 8-30ರಿಂದ 9-30 : | ಶ್ರೀ ಶಾರದಾಂಬಾ ಭಜನಾ ಮಂಡಳಿ ಇವರಿಂದ - **ಭಜನೆ** |
| ಪೂರ್ವಾಹ್ನ 9-30ರಿಂದ : | **ಶ್ರೀ ಸತ್ಯನಾರಾಯಣ ಪೂಜೆ ಆರಂಭ** |
| ಪೂರ್ವಾಹ್ನ 10-00ರಿಂದ 11-00 : | ಹೂಜೋಡಣಾ ಸ್ಪರ್ಧೆ (ಮುಕ್ತ ವಿಭಾಗ)<br>ಅಡುಗೆ ಸ್ಪರ್ಧೆ (ಮುಕ್ತ ವಿಭಾಗ)<br>(ಒಬ್ಬರಿಗೆ ಒಂದು ಸಿಹಿ, ಒಂದು ಖಾರ ವ್ಯಂಜನ)<br>ಮತ್ತು ರಂಗೋಲಿ ಸ್ಪರ್ಧೆ (ಮುಕ್ತ ವಿಭಾಗ) |
| ಪೂರ್ವಾಹ್ನ 11-00ರಿಂದ : | **ಮಹಾಸಭೆ** |
| ಮಧ್ಯಾಹ್ನ 12-30ರಿಂದ : | ಬಹುಮಾನ ವಿತರಣೆ ಧನ್ಯವಾದ,<br>ಮಂಗಳಾರತಿ, ಪ್ರಸಾದ ವಿತರಣೆ, ಭೋಜನ |

**ಹೆಚ್ಚಿನ ಮಾಹಿತಿಗಾಗಿ**

ಶ್ರೀ ಅನಿಲ್ ನೆಲ್ಲಿಕುಂಜ ✆ : 9448815172
ಶ್ರೀ ಸುರೇಶ್ ರಾವ್ ಕಡಬ ✆ : 9972760673
ಶ್ರೀಮತಿ ಕುಸುಮಾ ನವೀನ್ ಕುಮಾರ್ ✆ : 9480760904
ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ✆ : 9739155359

**ಜ್ಞಾನಶಕ್ತಿ ಮಾಸಪತ್ರಿಕೆ**

ಪ್ರಧಾನ ಸಂಪಾದಕರು :

ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು

• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :

• ಕರುಣ್ ರಾವ್ ಬೆಳ್ಳೆ • ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು :

• ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

7795116598 ✆ : 9343361618 e-mail : jnanashakthisss@gmail.com





# ಲ್ಯಾಂಡ್ ಟ್ರೇಡ್ಸ್ ಅದೀರಾ ಆಧುನಿಕ ವಾಸ್ತು ಸೌಂದರ್ಯದ ವಸತಿ ಮತ್ತು ವಾಣಿಜ್ಯ ಸಮುಚ್ಚಯ – ಉದ್ಘಾಟನೆ

**ಮಂಗಳೂರಿನ ಪ್ರತಿಷ್ಠಿತ ಲ್ಯಾಂಡ್ ಟ್ರೇಡ್ಸ್ ಬಿಲ್ಡರ್ಸ್ ಆಂಡ್ ಡೆವೆಲಪರ್ಸ್ ಪ್ರೈ. ಲಿ. ಸಂಸ್ಥೆಯು ನಗರದ ಉರ್ವಶ್ರೀ ಮಾರಿಯಮ್ಮ ದೇವಸ್ಥಾನ ರಸ್ತೆಯಲ್ಲಿ ನಿರ್ಮಿಸಿದ ಆಧುನಿಕ ಶೈಲಿಯ 'ಅದೀರಾ' ವಸತಿ ಮತ್ತು ವಾಣಿಜ್ಯ ಸಂಕೀರ್ಣದ ಉದ್ಘಾಟನೆಯು ನ. 19ರಂದು ನಡೆದಿರುತ್ತದೆ. 32ನೇ ವರ್ಷಕ್ಕೆ ಕಾಲಿಟ್ಟಿರುವ ಸಂಸ್ಥೆಯ ಭವ್ಯ ಪರಂಪರೆಯ ಸಂಭ್ರಮ ಹೆಚ್ಚಿಸುವಂತೆ 'ಅದೀರಾ' ನಿರ್ಮಾಣವಾಗಿದೆ.**

**ಮಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಶ್ರೀ ಡಿ. ವೇದವ್ಯಾಸ ಕಾಮತ್ ಅವರು ಉದ್ಘಾಟಿಸಿದ್ದು, ವಿಧಾನ ಪರಿಷತ್ ಸದಸ್ಯ ಶ್ರೀ ಹರೀಶ್ ಕುಮಾರ್ ಮುಖ್ಯ ಅತಿಥಿಗಳಾಗಿದ್ದು, ಸ್ಥಳೀಯ ಕಾರ್ಪೊರೇಟರ್ ಶ್ರೀ ಗಣೇಶ್ ಕುಲಾಲ್, ಕರ್ನಾಟಕ ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ರವಿಚಂದ್ರನ್ ಎಸ್. ಅವರು ಗೌರವ ಅತಿಥಿಗಳಾಗಿದ್ದರು. ಮೇಯರ್ ಶ್ರೀ ಸುಧೀರ್ ಶೆಟ್ಟಿ ಕಣ್ಣೂರ್ ಇವರು ಸಮಾರಂಭದ ಘನ ಅಧ್ಯಕ್ಷತೆಯನ್ನು ವಹಿಸಿದ್ದರು.**

**ಅದೀರಾ : ಸೀಮಿತ ಆವೃತ್ತಿಯ ವಸತಿ ಸಂಕೀರ್ಣ** : ಉರ್ವ ಶ್ರೀ ಮಾರಿಯಮ್ಮ ದೇವಸ್ಥಾನದ ಬಳಿ, 26 ಸೆಂಟ್ಸ್ ಜಮೀನಿನಲ್ಲಿ ನೆಲ ಮತ್ತು 4 ಅಂತಸ್ತುಗಳಲ್ಲಿ ನಿರ್ಮಾಣವಾಗಿರುವ ಅದೀರಾ ತಲಾ 1,695ರಿಂದ 1,845 ಚ. ಅಡಿಗಳನ್ನು ಹೊಂದಿರುವ 16 ಅತ್ಯಾಧುನಿಕ 3 ಬಿಹೆಚ್‌ಕೆ ಫ್ಲ್ಯಾಟ್‌ಗಳನ್ನು ಹೊಂದಿದೆ. ನೆಲಅಂತಸ್ತಿನ ರಸ್ತೆ ಅಭಿಮುಖದ ಪ್ರದೇಶದಲ್ಲಿ ವಾಣಿಜ್ಯ ಮಳಿಗೆಗಳಿದ್ದು, ವಸತಿ ಸಮುಚ್ಚಯದಿಂದ ಸಂಪೂರ್ಣ ಪ್ರತ್ಯೇಕಗೊಂಡಿದೆ. ವಸತಿ ಪ್ರದೇಶಕ್ಕೆ ಸಂಪೂರ್ಣ ಪ್ರತ್ಯೇಕತೆ ಇದ್ದು, ಸೂಕ್ತ ಭದ್ರತೆಯನ್ನು ಹೊಂದಿದೆ. ಅದೀರಾ ಯೋಜನೆಯು ಲ್ಯಾಂಡ್ ಟ್ರೇಡ್ಸ್‌ನ ಪರಂಪರೆಯಂತೆ ನಿರ್ಮಾಣದ ಸರ್ವಶ್ರೇಷ್ಠ ಪರಿಕರಗಳನ್ನು ಬಳಸಿದ್ದು ಸಂಪೂರ್ಣ ಸೌಲಭ್ಯ ಮತ್ತು ನೆಮ್ಮದಿ ಒದಗಿಸುವಂತೆ ವಾಸ್ತು ಶಾಸ್ತ್ರಕ್ಕೆ ಅನುಗುಣವಾಗಿ ನಿರ್ಮಾಣವಾಗಿದೆ.

ಅದೀರಾ ಯೋಜನೆಯು ಸಂದರ್ಶಕರ ಲಾಬಿ, ಮಕ್ಕಳ ಆಟದ ಪ್ರಾಂಗಣ, ರೂಫ್‌ಟಾಪ್ ಮಿನಿ ಪಾರ್ಟಿಹಾಲ್‌ಗಳನ್ನು ಹೊಂದಿದೆ. ಹೆಚ್ಚುವರಿಯಾಗಿ ಸಿಸಿ ಟಿ.ವಿ. ಭದ್ರತಾ ಕ್ಯಾಮರಾಗಳು, ಇಂಟರ್‌ಕಾಮ್ ಸೌಲಭ್ಯ, ನಿರಂತರ ನೀರು ಪೂರೈಕೆ, ರೆಟಿಕ್ಯುಲೇಟೆಡ್ ಗ್ಯಾಸ್ ಪೈಪ್‌ಲೈನ್, ಶೇ. 100ರಷ್ಟು ಡಿ.ಜಿ. ಪವರ್ ಬ್ಯಾಕ್‌ಅಪ್ ಹೊಂದಿದ್ದು, ಮಳೆನೀರು ಕೊಯ್ಲು, ಸೌರಶಕ್ತಿಯ ಬಿಸಿ ನೀರು ಪೂರೈಕೆ, 2 ಸ್ವಯಂ ಚಾಲಿತ ಎಲಿವೇಟರ್‌ಗಳು ಹಾಗೂ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಹೊಂದಿದೆ.

**ಸರ್ವ ಸಂಪರ್ಕ ಪ್ರದೇಶ** : ಉರ್ವ ಶ್ರೀ ಮಾರಿಯಮ್ಮ ದೇವಸ್ಥಾನ ರಸ್ತೆಯಲ್ಲಿರುವ ಅದೀರಾವು ನಿವಾಸಿಗಳಿಗೆ ಶಾಂತಿಯುತ ಪರಿಸರ ಒದಗಿಸುತ್ತಿದೆ. ಶ್ರೀ ಮಾರಿಯಮ್ಮ ದೇವಸ್ಥಾನ, ಉರ್ವ ಮಾರ್ಕೆಟ್, ಉರ್ವ ಕ್ರೀಡಾಂಗಣ, ಸುಲ್ತಾನ್ ಬತ್ತೇರಿ, ಗಾಂಧಿ ಪಾರ್ಕ್, ಗುರುಪುರ (ಫಲ್ಗುಣಿ ನದಿ), ಸುಲ್ತಾನ್ ಬತ್ತೇರಿ ಬೋಟ್ ಕ್ಲಬ್, ಲೇಡಿಹಿಲ್ ಚರ್ಚ್, ಲೇಡಿಹಿಲ್ ಶಾಲೆ, ಕೆನರಾ ಹೈಸ್ಕೂಲ್ ಉರ್ವ, ಸೈಂಟ್ ಅಲೋಶಿಯಸ್ ಸ್ಕೂಲ್ ಸನಿಹದಲ್ಲಿದೆ.

**ಲ್ಯಾಂಡ್ ಟ್ರೇಡ್ಸ್ ಪ್ರಮುಖ ಯೋಜನೆಗಳು : ಪ್ರಿಸ್ಟಿನ್** : ಚಿಲಿಂಬಿಯಲ್ಲಿ ಬರುತ್ತಿರುವ 37 ಮಹಡಿಗಳ ಐಷಾರಾಮಿ ಬಹುಮಹಡಿ ಕಟ್ಟಡದಲ್ಲಿ 3 ಬಿಹೆಚ್‌ಕೆ + 4 ಬಿಹೆಚ್‌ಕೆಗಳ ಒಟ್ಟು 102 ಅಪಾರ್ಟ್‌ಮೆಂಟ್‌ಗಳನ್ನು ಹೊಂದಿದ್ದು, ಪ್ರತೀ ಅಪಾರ್ಟ್‌ಮೆಂಟ್ ಕೂಡಾ ಅರಬ್ಬೀ ಸಮುದ್ರದ ಸುಂದರ ದೃಶ್ಯ ವೀಕ್ಷಣೆಯ ವೈಶಿಷ್ಟ್ಯವನ್ನು ಹೊಂದಿದೆ.

**ಶಿವಭಾಗ್** : ಕದ್ರಿ ಶಿವಭಾಗ್‌ನಲ್ಲಿ 32 ಅಂತಸ್ತುಗಳ ಗಗನಚುಂಬಿ ಯೋಜನೆಯಲ್ಲಿ 3, 4, 5 ಬಿಹೆಚ್‌ಕೆ ಹಾಗೂ 6 ಬಿಹೆಚ್‌ಕೆ ಡ್ಯೂಪ್ಲೆಕ್ಸ್ ಅಪಾರ್ಟ್‌ಮೆಂಟ್‌ಗಳನ್ನು ಹೊಂದಿದ್ದು, ಒಟ್ಟು 142 ಅಪಾರ್ಟ್‌ಮೆಂಟ್‌ಗಳು ಇವೆ. ಕೇವಲ 40% ಜಾಗದಲ್ಲಿ ಮಾತ್ರ ಕಟ್ಟಡ ಬರಲಿದ್ದು, ಉಳಿದ 60% ಭಾಗದಷ್ಟು ಜಾಗವು ತೆರೆದ ಜಾಗವಾಗಿರುತ್ತದೆ. ಇದಲ್ಲದೆ ಆಯ್ದ ಅಪಾರ್ಟ್‌ಮೆಂಟ್ ಸರಣಿಗಳಲ್ಲಿ ಸಮುದ್ರದ ಮನಮೋಹಕ ದೃಶ್ಯ ಲಭ್ಯವಿದೆ.

**ಅಲ್ಟೂರ** : ಬೆಂದೂರ್‌ವೆಲ್‌ನಲ್ಲಿ 32 ಅಂತಸ್ತುಗಳ ಗಗನಚುಂಬಿ ಯೋಜನೆಯು 3 ಹಾಗೂ 4 ಬಿಹೆಚ್‌ಕೆಗಳ 114 ಅಪಾರ್ಟ್‌ಮೆಂಟ್‌ಗಳನ್ನು ಹೊಂದಿದ್ದು, ಇನ್‌ಫಿನಿಟಿ ಪೂಲ್ ಮತ್ತಿತರ ಆಧುನಿಕ ಸೌಲಭ್ಯಗಳನ್ನು ಒಳಗೊಂಡಿದೆ.

**ನಕ್ಷತ್ರ** : ಮಣ್ಣಗುಡ್ಡೆಯಲ್ಲಿ ಈಗಾಗಲೇ ಉದ್ಘಾಟನೆಗೊಂಡಿರುವ ಈ ಪ್ರತಿಷ್ಠಿತ ಯೋಜನೆಯಲ್ಲಿ ಕೇವಲ ಒಂದು – 2 ಬಿಹೆಚ್‌ಕೆ ಅಪಾರ್ಟ್‌ಮೆಂಟ್‌ಗಳು ಮಾತ್ರ ಮಾರಾಟಕ್ಕೆ ಲಭ್ಯವಿರುತ್ತವೆ.

**ಸಾಲಿಟೇರ್** : ಹ್ಯಾಟ್‌ಹಿಲ್‌ನಲ್ಲಿತಲೆಎತ್ತಿ ನಿಂತಿರುವ ಈ ಗಗನಚುಂಬಿ ಕಟ್ಟಡದಲ್ಲಿ 143 ಐಷಾರಾಮಿ ಫ್ಲ್ಯಾಟ್‌ಗಳಿದ್ದು, ಕೆಲವೇ ಕೆಲವು 2 ಬಿಹೆಚ್‌ಕೆ ಫ್ಲ್ಯಾಟ್‌ಗಳು ಮಾರಾಟಕ್ಕೆ ಲಭ್ಯವಿದೆ.

**ಕಾಮತ್ ಗಾರ್ಡನ್** : ಉಳ್ಳಾಲ ಮಾಸ್ತಿಕಟ್ಟೆಯಲ್ಲಿ ಸಂಪೂರ್ಣ ಅಭಿವೃದ್ಧಿಗೊಂಡ 16 ಗೃಹ ನಿವೇಶನಗಳು, ಕನಿಷ್ಠ 5.3 ಸೆಂಟ್ಸ್‌ಗಳ ಅಳತೆಯಿಂದ ಪ್ರಾರಂಭಗೊಂಡು, ಕೆಲವೇ ನಿವೇಶನಗಳು ಮಾರಾಟಕ್ಕೆ ಲಭ್ಯವಿದೆ.

**ವಿಕ್ರಮ್ (ವಾಣಿಜ್ಯ ಸಂಕೀರ್ಣ)** : ಪಿವಿಎಸ್ ಜಂಕ್ಷನ್ ಬಳಿಯಿರುವ ಈ ವಾಣಿಜ್ಯ ಸಂಕೀರ್ಣವು ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡಿದ್ದು, ಶೋರೂಂ, ಬ್ಯೂಟಿಕ್, ಆಫೀಸ್ ಸ್ಪೇಸ್‌ಗಳು, ಕನ್‌ಸಲ್ಟಿಂಗ್ ಚೇಂಬರ್‌ಗಳು, ಕಾರ್ಪೊರೇಟ್ ಆಫೀಸ್‌ಗಳು, ಟ್ರೈನಿಂಗ್ ಸೆಂಟರ್‌ಗಳು ಇತ್ಯಾದಿ ವ್ಯವಹಾರಗಳಿಗೆ ಸೂಕ್ತವಾಗಿದೆ.

**ವಿಳಾಸ : ಲ್ಯಾಂಡ್ ಟ್ರೇಡ್ಸ್ ಬಿಲ್ಡರ್ಸ್ ಆಂಡ್ ಡೆವೆಲಪರ್ಸ್ ಪ್ರೈ.ಲಿ., 'ಮೈಲ್‌ಸ್ಟೋನ್–25', ಶಾಪ್ ನಂ. 515, 5ನೇ ಮಹಡಿ, ಕಲೆಕ್ಟರ್ಸ್‌ಗೇಟ್ ಜಂಕ್ಷನ್, ಬಲ್ಮಠ, ಮಂಗಳೂರು - 575 001**

**✆ : +91 88827 77444 | 98807 42159 | 98450 84866 | 96115 31026 • E-mail: sales@landtrades.in • Visit website : www.landtrades.in**

**ಸಂಸ್ಥೆಯ ಯೋಜನೆಗಳ ಮಾಹಿತಿಗಾಗಿ : 8882777444 ನಂಬರನ್ನು ಅಥವಾ www.landtrades.in ವೆಬ್‌ಸೈಟಿಗೆ ಭೇಟಿ ಕೊಡಬಹುದು.**

# ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ (ರಿ.), ಬಂಟ್ವಾಳ - ವಿಟ್ಲ ಇದರ ಕಾರ್ಯಕಾರಿ ಸಮಿತಿ ಸಭೆ



ತಾ. 02–12–2023ರಂದು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ (ರಿ.), ಬಂಟ್ವಾಳ ಇದರ ಅಧ್ಯಕ್ಷರಾದ ಶ್ರೀ ಭವಾನಿಶಂಕರ ರಾಯರ ಬಿ.ಸಿ.ರೋಡ್‌ನಲ್ಲಿರುವ ಮನೆ 'ಪ್ರಭಾನಿಧಿ' ಇಲ್ಲಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬಂಟ್ವಾಳ ವಲಯ – ವಿಟ್ಲ ಇದರ ಕಾರ್ಯಕಾರಿ ಸಮಿತಿ ಸಭೆಯು ಸಭಾದ ಅಧ್ಯಕ್ಷ ಶ್ರೀ ಕೃಷ್ಣ ಶರ್ಮ ಅನಾರು ಇವರ ಅಧ್ಯಕ್ಷತೆಯಲ್ಲಿ ನಡೆದಿರುತ್ತದೆ. ಈ ಸಭೆಯಲ್ಲಿ ಸ್ಥಾನಿಕ ಮಹಾಮಂಡಲದ ಪದಾಧಿಕಾರಿಗಳು ಮಹಾಮಂಡಳದ ಆಡಳಿತ ಮಂಡಳಿಯ ತೀರ್ಮಾನದಂತೆ ಸದಸ್ಯರು 19 ಸಂಘಗಳ ಭೇಟಿ ಕಾರ್ಯಕ್ರಮದಡಿಯಲ್ಲಿ ಬಂಟ್ವಾಳ ತಾಲೂಕು ಸಂಘದ ಭೇಟಿಗೆ ಚಾಲನೆ ನೀಡಿರುತ್ತಾರೆ.


ಮಹಾಮಂಡಳದ ಅಧ್ಯಕ್ಷರಾದ ಶ್ರೀ ಮಂಜುನಾಥ್ ಹೆಬ್ಬಾರ್, ಮಂಡಳದ ಸ್ಥಾಪಕ ಅಧ್ಯಕ್ಷರಾದ ಶ್ರೀ ಸಿ. ಎಸ್. ರಾವ್, ಕಾರ್ಯದರ್ಶಿ ಶ್ರೀ ಮುರಳೀಧರ ಶರ್ಮ, ಕೋಶಾಧಿಕಾರಿ ಶ್ರೀ ಉದಯ ಕುಮಾರ್ ಬಾರ್ಕೂರು, ಉಪಾಧ್ಯಕ್ಷರಾದ ಶ್ರೀ ಪ್ರಭಾಕರ್ ರಾವ್, ಬಂಟ್ವಾಳ ಸಂಘದ ಕಾರ್ಯದರ್ಶಿ ಶ್ರೀ ಶ್ರೀಧರ ರಾವ್ ನೆಟ್ಲ, ಮಂಡಳದ ಬಂಟ್ವಾಳ ಸಭಾದ ಪ್ರತಿನಿಧಿ ಶ್ರೀ ಸಂತೋಷ್ ರಾವ್ ಕಾವಳಕಟ್ಟೆ ಹಾಗೂ ಸಭಾ ಮತ್ತು ಪ್ರತಿಷ್ಠಾನದ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು. ಶ್ರೀ ರಮೇಶ ರಾವ್, ವಗ್ಗ ಇವರು ಧನ್ಯವಾದ ಸಮರ್ಪಿಸಿದರು.

# ಅಪಾರಕೀರ್ತಿ ಗಳಿಸಿ...



ಮಣಿಪಾಲ MAHE MSAP ಆರ್ಕಿಟೆಕ್ಚರ್ ಮಹಾವಿದ್ಯಾಲಯ ವಿದ್ಯಾರ್ಥಿನಿ **ಕು। ವರ್ಷಿಣಿ ವಿಟ್ಲ** B.des ಇಂಟೀರಿಯರ್ ಡಿಸೈನಿಂಗ್ ವಿಭಾಗದಲ್ಲಿ CGPA9.3 ಅಂಕಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದು, ಎರಡು ಬಾರಿ ಬ್ಯಾಚ್ ಟಾಪರ್ ಪ್ರಶಸ್ತಿ ಪಡೆದಿದ್ದಾಳೆ. ಪ್ರಸ್ತುತ TOTAL INTERIOR COLLABORATE (TIC) ಕುವೈಟ್‌ನಲ್ಲಿ ಉದ್ಯೋಗದಲ್ಲಿದ್ದಾಳೆ. ಇವಳು ಕುವೈಟ್‌ನಲ್ಲಿರುವ ಶ್ರೀ ರಾಜೇಶ್ ವಿಟ್ಲ ಮತ್ತು ಶ್ರೀಮತಿ ವಿದ್ಯಾ ಇವರ ಸುಪುತ್ರಿ ಹಾಗೂ ಶ್ರೀ ಎನ್. ಬಿ. ನಾಗೇಶ್ ರಾವ್ ಮತ್ತು ಶ್ರೀಮತಿ ವಸಂತಿ ದಂಪತಿಗಳ ಹಾಗೂ ಕೌಳಿಗೆ ಶ್ರೀ ಗಿರಿಧರ್ ರಾವ್ ಮತ್ತು ಶ್ರೀಮತಿ ವಿಜಯಲಕ್ಷ್ಮೀ ದಂಪತಿಗಳ ಮೊಮ್ಮಗಳು.

●●●




ಶ್ರೀ ರಾಧಾಕೃಷ್ಣ ಕೋಲ್ಪೆ ಮತ್ತು ಶ್ರೀಮತಿ ಗೀತಾ ಇವರ ಸುಪುತ್ರ ಶ್ರೀ ಶ್ರೇಯಸ್ ಕೋಲ್ಪೆ ಮಾಹೆ ಮಣಿಪಾಲ್ ವಿದ್ಯಾಲಯದಿಂದ ಎಂ.ಎ. ಪದವಿ ಪಡೆದಿದ್ದಾರೆ.



## ಶ್ರೀ ಮೂಕಾಂಬಿಕಾ ಯಕ್ಷಗಾನ ತರಬೇತಿ ಕೇಂದ್ರದ ದಶಮಾನೋತ್ಸವ

ಶ್ರೀ ಮೂಕಾಂಬಿಕಾ ಯಕ್ಷಗಾನ ತರಬೇತಿ ಕೇಂದ್ರದ ದಶಮಾನೋತ್ಸವ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಶ್ರೀಮತಿ ಪುಷ್ಪಾ ಶ್ರೀನಿವಾಸ್ ಭಾಗವಹಿಸಿದರು.

## ಶ್ರೀ ಸುಬ್ರಹ್ಮಣ್ಯ ಸಭಾದ ದೀಪಾವಳಿ ಆಚರಣೆಯ ಸಾಂಪ್ರದಾಯಿಕ ಉಡುಗೆ ಸ್ಪರ್ಧೆಯ ವಿಜೇತರು


**ಪುರುಷರ ವಿಭಾಗ** : 1. ಶ್ರೀ ಅನಿಲ್ ನೆಲ್ಲಿಕುಂಜೆ 2. ಶ್ರೀ ಶ್ರೀಹರಿ ಅದ್ಯಪಾಡಿ

**ಮಹಿಳಾ ವಿಭಾಗ** : 1. ಶ್ರೀಮತಿ ಸ್ನೇಹಲತಾ ದಿವಾಕರ್ 2. ಶ್ರೀಮತಿ ಶಶಿಕಲಾ ಶ್ರೀಹರಿ

**ಮಕ್ಕಳ ವಿಭಾಗ** : 1. ಅಂಕಿತಾಶ್ರೀ ಮತ್ತು ಗೌರೀಶ್ ರಾವ್ 2. ಶರಣ್ಯ




## ಅಕ್ಟೋಬರ್ 15ರಂದು ಮೂಡುಬಿದಿರೆ ರತ್ನಾಕರ ಭಟ್ಟರಿಗೆ ಸಮಾಜ ಮಂದಿರ ಸಭಾ–2023 'ಧಾರ್ಮಿಕ–ಕಲೆ–ಸಂಸ್ಕೃತಿ' ಪುರಸ್ಕಾರ



ಮೂಡುಬಿದಿರೆಯ ಸ್ಥಾನಿಕ ಸಮಾಜದಲ್ಲಿ ಎಲೆಮರೆಯ ಕಾಯಿಯಂತಿದ್ದು, ಅಪ್ರತಿಮ ಕಾರ್ಯದೊಂದಿಗೆ ಧಾರ್ಮಿಕ–ಕಲೆ–ಸಂಸ್ಕೃತಿಗಳೆಲ್ಲದರಲ್ಲೂ ಪರಿಣತರಾದ ಅಪ್ರತಿಮ ಸಾಧಕ ಪುರಾಣಪ್ರಸಿದ್ಧ ದೊಡ್ಮನೆ ರಸ್ತೆಯ ಶ್ರೀ ಚಂದ್ರಶೇಖರ ದೇವಾಲಯದ ಆನುವಂಶಿಕ ಅರ್ಚಕ ಮೊಕ್ತೇಸರ ಶ್ರೀ ರತ್ನಾಕರ ಭಟ್ಟರು. ಮಾರ್ಪಳ್ಳಿ ಗೋಪಾಲಕೃಷ್ಣ – ಶ್ರೀಮತಿ ಸತ್ಯಭಾಮ ಇವರ ಎರಡನೇ ಪುತ್ರರಾಗಿ 1947 ನವಂಬರ್ 14ರಂದು ಮೂಡುಬಿದಿರೆಯಲ್ಲಿ ಜನಿಸಿದ ರತ್ನಾಕರ ಭಟ್ಟರು ಅಜ್ಜ ಕೊಕ್ರಾಡಿ ರಾಮಪ್ಪಯ್ಯ ಅಧಿಕಾರಿ ಅವರ ಪ್ರೀತಿಯ ಮೊಮ್ಮಗನಾಗಿ ಬೆಳೆದು 1971ರಲ್ಲಿ ಅಜ್ಜನಿಂದ ಅಧಿಕೃತವಾಗಿ ದೇವಾಲಯದ ಅರ್ಚಕತನವನ್ನು ಮುಂದುವರಿಸಿದ್ದರು. 1987ರಲ್ಲಿ ಪೂರ್ಣಪ್ರಮಾಣದಲ್ಲಿ ದೇವಾಲಯದ ಅರ್ಚಕರಾಗಿ ಕೈಂಕರ್ಯವನ್ನು ಪ್ರಾರಂಭಿಸಿದರು. ಶೃಂಗೇರಿಯ ಹಿಂದಿನ ಯತಿವರ್ಯರಾದ ಶ್ರೀ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರು ಮೂಡುಬಿದಿರೆಗೆ ಬಿಜಯಂಗೈದಾಗ ಇವರ ಮನೆಯಲ್ಲಿಯೇ ತಂಗಿದ್ದರು. ಅಂದು ದಿನಾಂಕ 09–05–1987ರಲ್ಲಿ ಶ್ರೀಗಳ ಸೇವೆಯನ್ನು ಗೈದು ಫಲಮಂತ್ರಾಕ್ಷತೆಯನ್ನು ಪಡೆದು ಕೃತಾರ್ಥರಾಗುತ್ತಾರೆ.

ನಾರಾವಿ ತಿಮರಡ್ಡ ನಾರಾಯಣರಾಯರ ಮಗಳು ವರದಳನ್ನು ದಿನಾಂಕ 30–04–1975ರಲ್ಲಿ ಮದುವೆಯಾದ ರತ್ನಾಕರ ಭಟ್ಟರು 3 ಹೆಣ್ಣು ಮಕ್ಕಳು, ಒಬ್ಬ ಮಗನನ್ನು ಪಡೆದ ಸುಖಿ ಸಂಸಾರವನ್ನು ನಡೆಸುತ್ತಿದ್ದಾರೆ. ಮೂಡುಬಿದಿರೆಯ ಶ್ರೀ ಮಹಾಮಾಯಿ ದೇವಸ್ಥಾನದಲ್ಲಿ 1991ರಿಂದ ಗಣಪತಿ ಮೂರ್ತಿಯ ರಚನೆಯಲ್ಲಿ ತೊಡಗಿಸಿಕೊಂಡ ರತ್ನಾಕರ ರಾಯರು ಕೆಲವು ವರ್ಷಗಳ ತರುವಾಯ ಮನೆಯಲ್ಲಿಯೇ ಪ್ರತಿವರ್ಷ 10–12 ಶ್ರೀ ಗಣೇಶ ಮೂರ್ತಿಯನ್ನು ರಚಿಸಿದ್ದಾರೆ. ಸುಮಾರು ಮೂರು ವರ್ಷಗಳ ಕಾಲ ಶಾರದಾ ಮೂರ್ತಿಯ ರಚನೆಯನ್ನೂ ಮಾಡಿ ಸಾರ್ವಜನಿಕವಾಗಿ ಸಂಮಾನವನ್ನು ಪಡೆದಿರುತ್ತಾರೆ.

ಪ್ರತಿ ವರ್ಷ ಶ್ರೀ ಚಂದ್ರಶೇಖರ ದೇವರ ಶಿವರಾತ್ರಿ ಸಂದರ್ಭದ ವಿವಿಧ ಧಾರ್ಮಿಕ, ಸಾಂಸ್ಕೃತಿಕ, ಕಾರ್ಯಕ್ರಮ, ಸ್ಪರ್ಧೆಗಳನ್ನು ನಡೆಸಿ ಊರಭಕ್ತ ಗಣವನ್ನು ಹೆಚ್ಚಿಸಿದ್ದಾರೆ. ಪ್ರತಿ ವರ್ಷ ಧನುರ್ ಮಾಸದಲ್ಲಿ ಒಂದು ತಿಂಗಳ ಪರ್ಯಂತ ಉಷಾಃಕಾಲ ಪೂಜೆ ನಡೆಸುತ್ತಾರೆ. ದೇವಾಲಯದಲ್ಲಿ ಆಗಾಗ ಧನ್ವಂತರಿ ಪೂಜೆ, ಶಿವಪಂಚಾಕ್ಷರೀ ಕೋಟಿ ಜಪಯಜ್ಞ, ಮೃತ್ಯುಂಜಯ ಶಾಂತಿ ಹೋಮ, ಗ್ರಹಣ ಶಾಂತಿ ಹೋಮ ಇತ್ಯಾದಿಗಳನ್ನು ನಡೆಸಿ ಭಕ್ತಾದಿಗಳಿಗೆ ಪರಿಹಾರಾರ್ಥ ಅವಕಾಶವನ್ನು ಒದಗಿಸಿಕೊಡುತ್ತಿದ್ದಾರೆ. ವಿಶೇಷ ಸಂದರ್ಭಗಳಲ್ಲೆಲ್ಲ ದೇವರಿಗೆ ಲಾಲಕಿ, ಬಂಡಿ ರಥಸೇವೆ, ರಂಗಪೂಜೆ, ಶತ ರುದ್ರಾಭಿಷೇಕ ದಂತಹ ಸಂದರ್ಭಗಳನ್ನು ಒದಗಿಸಿ ಭಕ್ತರ ಅಭೀಷ್ಟವನ್ನು ನೆರವೇರಿಸುತ್ತಿದ್ದಾರೆ.

ರತ್ನಾಕರ ಭಟ್ಟರ ಮೌನ ಕೈಂಕರ್ಯಗಳನ್ನು ಕಂಡು ಮೆಚ್ಚಿದ ಸಾರ್ವಜನಿಕರು ಪುತ್ತಿಗೆ ಶ್ರೀ ಶಾರದೋತ್ಸವ ಸಮಿತಿ ಸನ್ಮಾನ 2018, ಮೂಡುಬಿದಿರೆ ಕೋ–ಆಪರೇಟಿವ್ ಬ್ಯಾಂಕ್ ಸಮ್ಮಾನ 2021, ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಸನ್ಮಾನ 2022ಗಳನ್ನು ನೀಡಿ ಈಗಾಗಲೇ ಸನ್ಮಾನಿಸಿರುತ್ತದೆ.

***ರಾಯಿ ರಾಜಕುಮಾರ್, ಮೂಡುಬಿದಿರೆ***

ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್ ಮತ್ತು ಶ್ರೀಲತಾ ಹಾಗೂ ತನ್ವಿ, ನಿವೇದ, ದೃತಿ ಮತ್ತು ದ್ರುವ್**




**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services



1st Floor, Bharath Building, P. M. Rao Road, Hampankatta, Mangaluru - 575 001

## ಶ್ರೀ ಸುಕುಮಾರ ಆಲಂಪಾಡಿಯವರ 'ಜ್ಯೋತಿಷ್ಯ ಸಾರಕೋಶ'ದ ಬಿಡುಗಡೆ



ಕಾಸರಗೋಡಿನ 'ಸುಜೀವ ಪ್ರಕಾಶನ' ಹಾಗೂ ಮಂಗಳೂರಿನ 'ಸಾಹಿತ್ಯ ಕೇಂದ್ರ'ದ ಜಂಟಿ ಆಶ್ರಯದಲ್ಲಿ ಕಾಸರಗೋಡಿನ ಪ್ರಸಿದ್ಧ ಜ್ಯೋತಿಷಿ ಶ್ರೀ ಸುಕುಮಾರ ಆಲಂಪಾಡಿಯವರ 'ಜ್ಯೋತಿಷ್ಯ ಸಾರಕೋಶ' (ಜ್ಯೋತಿಷ್ಯದ ಕುರಿತಾದ ಸಮಗ್ರ ಚಿಂತನೆ, ಪದಕೋಶ ಹಾಗೂ ಮಾಹಿತಿಕೋಶ) ಎಂಬ ಕೃತಿಯನ್ನು ವೈದಿಕರೂ, ಸಂಸ್ಕೃತ ವಿದ್ವಾಂಸರೂ ಆದ ಡಾ। ಸತ್ಯಕೃಷ್ಣ ಭಟ್ ಇತ್ತೀಚೆಗೆ ಮಂಗಳೂರಿನ 'ಮಂಗಳ ಸಭಾಭವನ'ದಲ್ಲಿ ಬಿಡುಗಡೆಗೊಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಗಳೂರಿನ ಹಿರಿಯ ವೈದಿಕ ವಿದ್ವಾಂಸರು ಹಾಗೂ ಪಂಡಿತ ಪಂಚಾಂಗಕರ್ತರೂ ಆದ ಪಂಡಿತ ನರಸಿಂಹ ಆಚಾರ್ಯರು ವಹಿಸಿದ್ದರು. ಹಿರಿಯ ಜ್ಯೋತಿಷಿ ಶ್ರೀ ತೆಕ್ಕುಂಜೆ ಜಯಶಂಕರ ಭಟ್ ಶುಭಾಶಂಸನೆಗೈದರು. ಡಾ। ಶೋಭಿತ ಸತೀಶ್ ಸ್ವಾಗತಿಸಿ, 'ಸಾಹಿತ್ಯ ಕೇಂದ್ರ'ದ ಶ್ರೀ ರತ್ನಾಕರ್ ಧನ್ಯವಾದಗೈದರು.

## 'ತಾಯಿ' ಆಲ್ಬಮ್‌ಸಾಂಗ್ ಲೋಕಾರ್ಪಣೆ




ಅನುಷಾ ಅನುರಾಗ ಯೂಟ್ಯೂಬ್ ಚಾನೆಲ್‌ನ ಇನ್ನೊಂದು ಮಹೋನ್ನತ ಕೊಡುಗೆ 'ತಾಯಿ' ಎಂಬ ಆಲ್ಬಮ್ ಸಾಂಗ್ ದಿನಾಂಕ 22–11–2023ರಂದು ಸಾಯಂಕಾಲ ಶ್ರೀಮತಿ ರೂಪಲಕ್ಷ್ಮಿ ಹರೀಶ್ ರಾವ್ ಇವರ 'ಪದ್ಮಶ್ರೀ' ಮನೆಯಲ್ಲಿ ಹಲವಾರು ಗಣ್ಯರ ಸಮ್ಮುಖದಲ್ಲಿ ವಿದುಷಿ ಶ್ರೀಮತಿ ಗೀತಾ ಸರಳಾಯ ಇವರ ಅಮೃತಹಸ್ತದಲ್ಲಿ ಲೋಕಾರ್ಪಣೆಗೊಂಡಿತು.

ಕವಿ ಕೀರ್ತಿಶೇಷ ಬಿ. ಯನ್. ಗೋಪಾಲಕೃಷ್ಣ ರಾವ್ ಅವರು ಬರೆದಂತಹ 'ನಲ್ಲೆಗೆ' ಎಂಬ ಕವನ ಸಂಕಲನದಿಂದ ತಾಯಿ ಎಂಬ ಕವನವನ್ನು ಆರಿಸಿಕೊಳ್ಳಲಾಗಿತ್ತು. ಸುಪ್ರಸಿದ್ಧ ಗಾಯಕಿ ಎಂ. ಡಿ. ಪಲ್ಲವಿ ಅವರು ಹಾಡಿರುವ ಈ ಹಾಡಿಗೆ ಶರತ್ ಬಿಳಿನೆಲೆ ಇವರು ಸಂಗೀತ ಸಂಯೋಜಿಸಿದ್ದರು. ಬಿ. ಯನ್. ಗೋಪಾಲಕೃಷ್ಣ ರಾವ್ ಅವರ ಮೊಮ್ಮಗಳಾದ ಚಲನಚಿತ್ರ ಹಾಗೂ ಧಾರವಾಹಿಗಳ ನಾಯಕಿ ನಟಿ ತನ್ವೀ ರಾವ್ ಅವರು ನೃತ್ಯ ನಿರ್ದೇಶನ ಮಾಡಿ ಆಲ್ಬಮ್ ಸಾಂಗ್ ಅನ್ನು ನಿರ್ದೇಶಿಸಿದ್ದಾರೆ. ಶ್ರೀಮತಿ ರೂಪಲಕ್ಷ್ಮಿ ರಾವ್ ಅವರ ನಿರ್ಮಾಣದ ಈ ಆಲ್ಬಮ್ ಸಾಂಗ್‌ನಲ್ಲಿ ತನ್ವಿ ರಾವ್, ಶ್ರೀಮತಿ ಸೌಜನ್ಯ ರಾವ್ ನಂದಳಿಕೆ, ಬೇಬಿ ಸುಹಾನಿ, ಮಾಸ್ಟರ್ ಶೌರ್ಯ ಇವರೆಲ್ಲ ಅಭಿನಯಿಸಿದ್ದಾರೆ.

## ಅಳಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಅಂಬಲ್ಪಾಡಿ ನಿವಾಸಿ ಎಚ್. ಎನ್. ಶಾನುಭಾಗ್‌ರವರ ಪತ್ನಿ **ಶ್ರೀಮತಿ ಮಹಾಲಕ್ಷ್ಮಿ ಶಾನುಭಾಗ್** (64) ಗುರುವಾರ ತಾರೀಕು 30–11–2023ನೇ ಗುರುವಾರ ನಿಧನರಾದರು. ಅವರು ಪತಿ, ಮಗ, ಮಗಳನ್ನು ಅಗಲಿದ್ದಾರೆ. ಮಹಾಲಕ್ಷ್ಮಿಯವರು ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದಲ್ಲಿ ಹಾಗೂ ಮಹಿಳಾ ವೇದಿಕೆಯಲ್ಲಿ ಇತ್ತೀಚಿನವರೆಗೂ ಸಕ್ರಿಯರಾಗಿದ್ದರು.

●●●



**ಶ್ರೀಮತಿ ದೇವಕಿ** (70) ದಿ। ಅನಾರು ಭಾಸ್ಕರ ರಾವ್‌ರವರ ಧರ್ಮಪತ್ನಿ ಇವರು ತಾರೀಕು 25–11–2023ನೇ ಶನಿವಾರದಂದು ಅನಾರಿನಲ್ಲಿ ನಿಧನ ಹೊಂದಿದರು. ಅವರು ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



**ಶ್ರೀ ರಾಧಾಕೃಷ್ಣ ರಾವ್ ಎನ್. ಎಮ್.** (86) ನಿವೃತ್ತ ಪಿ.ಡಬ್ಲ್ಯೂ.ಡಿ. ಸಿವಿಲ್ ಇಂಜಿನಿಯರ್ ಇವರು ನೆಟ್ಟದಲ್ಲಿರುವ ತಮ್ಮ ಸ್ವಗೃಹದಲ್ಲಿ ತಾ. 27–11–2023ನೇ ಸೋಮವಾರ ಶಿವೈಕ್ಯರಾಗಿರುತ್ತಾರೆ. ಇವರು ಪತ್ನಿ, ಮಗ, ಸೊಸೆ ಮತ್ತು ಮೊಮ್ಮಕ್ಕಳನ್ನು ಅಗಲಿರುತ್ತಾರೆ.

●●●



ಕಾರ್ಕಳ ಶ್ರೀ ದಿವಾಕರ್ ರಾವ್ ಇವರ ಧರ್ಮಪತ್ನಿ **ಶ್ರೀಮತಿ ವಾಣಿ** (68) ತಾ 18–11–2023ನೇ ಶನಿವಾರ ಬೆಂಗಳೂರಲ್ಲಿ ನಿಧನ ಹೊಂದಿದರು. ಇವರು ಪತಿ, ಓರ್ವ ಮಗಳನ್ನು ಅಗಲಿದ್ದಾರೆ.



ಪಾಂಡವಪುರ ವೆಂಕಟ ರಾವ್ ಇವರ ಧರ್ಮಪತ್ನಿ **ಶ್ರೀಮತಿ ಅರುಂಧತಿ ರಾವ್** (71) ತಾ. 16–11–2023ನೇ ಗುರುವಾರ ಪುತ್ತೂರಿನ 'ಶಿವಸದನ'ದಲ್ಲಿ ನಿಧನ ಹೊಂದಿದರು. ಕಳೆದ 7 ವರ್ಷ ಗಳಿಂದ ಶಿವಸದನದಲ್ಲಿದ್ದ ಅವರು ಮಿತಭಾಷಿಯಾಗಿದ್ದು, ತಮ್ಮ ನಗುಮೊಗದಿಂದ ಎಲ್ಲಾ ನಿವಾಸಿಗಳೊಂದಿಗೆ ಆತ್ಮೀಯರಾಗಿದ್ದರು.

ಸದಾ ದೀಪದ ಬತ್ತಿಹೊಸೆಯುತ್ತಾ, ಭಜನೆ ಗುಣಿಗುಣಿಸುತ್ತಾ, ಅತಿಥಿಗಳೊಂದಿಗೆ ಹಿತಮಿತವಾಗಿ ಬೆರೆಯುತ್ತಿದ್ದರು. ಅವರಿಗೆ ಭಗವಂತನು ಸದ್ಗತಿ ಪ್ರಾಪ್ತಿಸಲಿ ಎಂದು ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಪ್ರಾರ್ಥಿಸುತ್ತೇವೆ.

●●●



ಉಪನ್ಯಾಸಕ, ಹವ್ಯಾಸಿ ಯಕ್ಷಗಾನ ಕಲಾವಿದ, ಅರ್ಥಧಾರಿ, ಕೀರ್ತನಕಾರ, ಪ್ರವಚನಕಾರ, ಲೇಖಕ ಹೀಗೆ ಸಾಂಸ್ಕೃತಿಕ ಲೋಕದಲ್ಲಿ ಬಹುಮುಖಿಯಾಗಿ ತೊಡಗಿಸಿಕೊಂಡಿದ್ದ **ಮರೂರು ನಾರಾಯಣ ಹೆಬ್ಬಾರ್** (83) ತಾ. 15–11–2023ನೇ ಬುಧವಾರ ನಿಧನರಾದರು.

ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿಯ ಎಲ್ಲಾ ಕಾರ್ಯಕ್ರಮಗಳಲ್ಲಿ ಅಪಾರ ಸೇವೆ ಸಲ್ಲಿಸಿರುತ್ತಾರೆ. ಅಂಬಲಪಾಡಿ ಲಕ್ಷ್ಮೀಜನಾರ್ಧನ ಯಕ್ಷಗಾನ ಕಲಾಮಂಡಳಿಯ ಆನಂದ ಗಾಣಿಗ ಪ್ರಶಸ್ತಿ, ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವು ಪುರಸ್ಕಾರಗಳಿಗೆ ಭಾಜನರಾಗಿದ್ದರು.

●●●



**ಶ್ರೀ ರಮೇಶ್ ಮಧೂರು** (57) ತಾರೀಕು 21–11–2023ನೇ ಮಂಗಳವಾರ ಕಾಸರಗೋಡಿನಲ್ಲಿ ನಿಧನ ಹೊಂದಿದರು. ಅವರು ಪತ್ನಿಯನ್ನು ಅಗಲಿದ್ದಾರೆ.

●●●



ಮುಳಿಮಜಲು ನಿವಾಸಿ ಪ್ರಸ್ತುತ ಉಡುಪಿಯ ಕುಂಜಿಬೆಟ್ಟು ಬೈಲಕೆರೆಯಲ್ಲಿ ವಾಸ್ತವ್ಯವಿದ್ದ ಕೆನರಾ ಬ್ಯಾಂಕ್‌ನ ನಿವೃತ್ತ ಅಧಿಕಾರಿ **ಗೋಪಾಲಕೃಷ್ಣ ಕೋಲ್ಪೆ** (82) ಇವರು ತಾ. 26–11–2023ನೇ ರವಿವಾರ ನಿಧನ ಹೊಂದಿದರು. ಮೃತರು ಪತ್ನಿ, ಪುತ್ರ ಕಡಬದ ಔಷಧ ಉದ್ಯಮಿ ಶ್ರೀ ರಾಜೇಶ್ ಕೋಲ್ಪೆ ಹಾಗೂ ಪುತ್ರಿ ಉಡುಪಿ ನಗರಸಭಾ ಸದಸ್ಯೆ ರಜನಿ ಹೆಬ್ಬಾರ್ ಅವರನ್ನು ಅಗಲಿದ್ದಾರೆ.

ಮಂಗಳೂರು ಗೋವಾ, ಧಾರವಾಡ, ಶಿಕಾರಿಪುರ, ಮೂಡಿಗೆರೆ, ಆಗ್ರಾ ಮುಂತಾದೆಡೆ ಕೆನರಾ ಬ್ಯಾಂಕ್ ಶಾಖೆಗಳಲ್ಲಿ ಕಾರ್ಯನಿರ್ವಹಿಸಿದ್ದ ಅವರು ಹಾಸನ ಜಿಲ್ಲಾ ಲೀಡ್ ಬ್ಯಾಂಕ್ ಮೆನೇಜರ್ ಆಗಿ ಕಾರ್ಯನಿರ್ವಹಿಸಿ ಸ್ವಯಂನಿವೃತ್ತಿ ಪಡೆದಿದ್ದರು. ಕಡಬ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ, ಉಡುಪಿ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಅವರು ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ಇವರು ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು.

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



'ಅನುಷಾ ಅನುರಾಗ' ಯೂಟ್ಯೂಬ್ ಚಾನೆಲ್ 'ತಾಯಿ' ಆಲ್ಬಮ್ ಸಾಂಗ್ ಲೋಕಾರ್ಪಣೆ ಶುಭಾವಸರದಂದು ಶ್ರೀಮತಿ ರೂಪಲಕ್ಷ್ಮಿ ಹರೀಶ್ ರಾವ್ ಇವರು ತಮ್ಮ ತಂದೆ ಶ್ರೀ ಬಿ. ಎನ್. ಗೋಪಾಲಕೃಷ್ಣ ರಾವ್ ಸ್ಮರಣಾರ್ಥ ತಮ್ಮ ತಾಯಿ ಶ್ರೀಮತಿ ಲೀಲಾವತಿ ಗೋಪಾಲಕೃಷ್ಣ ರಾವ್ ಜತೆಗೂಡಿ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿನಿಲಯಕ್ಕೆ ರೂ. 15,000/– ನೀಡಿದ್ದಾರೆ. ಈ ಹಿಂದೆಯೂ ಅವರು ರೂ. 1,00,000/– (ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ, ಶ್ರೀಮತಿ ಪ್ರೇಮಲತಾ ರಾವ್, ಶ್ರೀ ಶ್ರೀಹರಿ ಅದ್ಯಪಾಡಿ ಉಪಸ್ಥಿತರಿದ್ದರು.



ಅದ್ಯಪಾಡಿ ಶ್ರೀ ಸದಾಶಿವ ರಾವ್ ಮತ್ತು ಶ್ರೀಮತಿ ಭಾರತೀ ರಾವ್ ಸ್ಮರಣಾರ್ಥ ಅವರ ಪುತ್ರ ಶ್ರೀ ಉಮಾಶಂಕರ್ ರಾವ್, ಅದ್ಯಪಾಡಿ ಮತ್ತು ಶ್ರೀಮತಿ ಪ್ರೇಮಲತಾ ರಾವ್, ಪುತ್ರಿ ಚ್ಯುತಿಕಲಾ ರಾವ್ ಮತ್ತು ಶ್ರೀ ಶಾಂತಾರಾಮ್ ರಾವ್ ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 25,000/– ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಶ್ರೀ ಸಭಾ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ದೇಣಿಗೆ ಸ್ವೀಕರಿಸಿದರು.

**'ಶಿವಸದನ' ವಸತಿನಿಲಯವು ಸುಮಾರು ರೂ. 5 ಕೋಟಿಗಳ ಯೋಜನೆ ಆಗಿದ್ದು, ರೂ. 1,21,63,000/– ಸಾಲ ಬಾಕಿ ಇರುತ್ತದೆ. ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ವಸ್ತುರೂಪದಲ್ಲೂ ದೇಣಿಗೆ ನೀಡಬಹುದು. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 40ಕ್ಕೂ ಹೆಚ್ಚು ನಿವಾಸಿಗಳಿದ್ದು, ಅವರಿಗೆ ಮಿತದರದಲ್ಲಿ ಸಸ್ಯಾಹಾರಿ ಊಟೋಪಚಾರ ಲಭ್ಯವಿರುತ್ತದೆ. ಅಪೇಕ್ಷಿತರಿಗೆ ಮಾಹಿತಿನೀಡಿ ಸಹಕರಿಸಿ.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀ ಕರುಣ್ ರಾವ್ ಬೆಳ್ಳೆ ಮೊಬೈಲ್ : 7337634359. ಶ್ರೀ ಪಿ. ಶ್ರೀಕಾಂತ್ ರಾವ್ ಮೊಬೈಲ್ : 7795116598.**



## ಶುಭವಿವಾಹ

ಮಠದಬೆಟ್ಟು ಶ್ರೀ ನಾಗೇಶ್ ಶರ್ಮ ಮತ್ತು ಶ್ರೀಮತಿ ಭುವನೇಶ್ವರಿಯವರ ಸುಪುತ್ರ **ಚಿ। ಸಾಯಿಪ್ರಸಾದ್** ಹಾಗೂ ತಿಪಟೂರಿನ ಕುಂಜಿರ್ಕಾನ ಶ್ರೀ ಕೆ. ವಾಸುದೇವ ಭಟ್ ಮತ್ತು ಶ್ರೀಮತಿ ಭಾರತೀಯವರ ಸುಪುತ್ರಿ **ಚಿ। ಸೌ। ಪ್ರಸಿದ್ಧಾ** ಇವರ ವಿವಾಹವು ತಾರೀಕು 22–11–2023ನೇ ಬುಧವಾರ ತಿಪಟೂರಿನ 'ಶ್ರೀ ಶಂಕರಮಠ ವಿದ್ಯಾರ್ಥಿನಿಲಯದ ಆವರಣ'ದಲ್ಲಿ ನಡೆಯಿತು. ಶ್ರೀ ಸಾಯಿಪ್ರಸಾದ್ ಇವರು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

❋ ❋ ❋

ಅಂಬಲಪಾಡಿ ಶ್ರೀ ಶ್ರೀಪತಿ ರಾವ್ ಮತ್ತು ಶ್ರೀಮತಿ ವಿಜಯಲಕ್ಷ್ಮೀ ಎಸ್. ರಾವ್ ಇವರ ಪುತ್ರ **ಚಿ। ಕಾರ್ತಿಕ್** ಹಾಗೂ ಕುಕ್ಕೆಹಳ್ಳಿ ಶ್ರೀ ದಿನೇಶ್ ಎಸ್. ರಾವ್ ಮತ್ತು ಶ್ರೀಮತಿ ತಾರಾ ಡಿ. ರಾವ್ ಇವರ ಪುತ್ರಿ **ಚಿ। ಸೌ। ಅಂಕಿತಾ** ಇವರ ವಿವಾಹ ತಾರೀಕು 29–11–2023ನೇ ಬುಧವಾರ ಪರ್ಕಳದ 'ಶ್ರೀ ಸುರಕ್ಷಾ ಸಭಾಭವನ'ದಲ್ಲಿ ನೆರವೇರಿತು.

❋ ❋ ❋

ಶ್ರೀಮತಿ ಮಮತಾದೇವಿ ಮತ್ತು ಕೂಡ್ಲು ಶ್ರೀ  ವೇಣುಗೋಪಾಲ್ ಶಾನುಭೋಗ್ ಇವರ ಪುತ್ರ **ಚಿ। ಆದಿತ್ಯ ಕೂಡ್ಲು** ಹಾಗೂ ಶ್ರೀಮತಿ ಅಮಿತಾ ಮತ್ತು ಶ್ರೀ ಸುಬ್ರಹ್ಮಣ್ಯ ಎಂ.ಎನ್. ಇವರ ಪುತ್ರಿ **ಚಿ। ಸೌ। ಸುಪ್ರೀತಾ ಭಟ್** ಇವರ ವಿವಾಹ ತಾ. 7–12–2023ನೇ ಗುರುವಾರ ಪುತ್ತೂರಿನ 'ಒಕ್ಕಲಿಗ ಗೌಡ ಸಮುದಾಯ ಭವನ'ದಲ್ಲಿ ನಡೆಯಿತು.

❋ ❋ ❋

ಶ್ರೀಮತಿ ರಶ್ಮಿ ಮತ್ತು ಶ್ರೀ ವೀರೇಶ್ ಎಸ್. ರಾವ್ ಇವರ ಪುತ್ರಿ **ಚಿ। ಸೌ। ಅದಿತಿ** ಹಾಗೂ ಶ್ರೀಮತಿ ಜಯಶ್ರೀ ಮತ್ತು ಶ್ರೀ ಪ್ರಕಾಶ್ ಶ್ರೀನಿವಾಸ್ ಹೆಬ್ಬಾರ್ ಇವರ ಸುಪುತ್ರ **ಚಿ। ಈಶ್ವರ್** ಇವರ ವಿವಾಹ ತಾ. 6–12–2023ನೇ ಬುಧವಾರ ಬೆಂಗಳೂರಿನ ಕೂಡಿಗೆಹಳ್ಳಿ 'ಶ್ರೀ ಜ್ಞಾನಶಕ್ತಿ ಮಂಟಪ'ದಲ್ಲಿ ನೆರವೇರಿತು.

ಹಿರಿಯಡಕ ಆಳುಗ್ಗೇಲು ವಾಸುದೇವ ರಾವ್ ಮತ್ತು ಶ್ರೀಮತಿ ಜಾಹ್ನವಿ ರಾವ್ ಇವರ ಸುಪುತ್ರ **ಚಿ। ಶಿವರಾಂ ರಾವ್** ಹಾಗೂ ಶ್ರೀ ಸತ್ಯನಾರಾಯಣ ಭಟ್ ಮತ್ತು ಶ್ರೀಮತಿ ಗಾಯತ್ರಿಯವರ ಸುಪುತ್ರಿ **ಚಿ। ಸೌ। ಸರಸ್ವತಿ**ಯವರ ವಿವಾಹ ತಾ. 19–11–2023ನೇ ರವಿವಾರ ಕುಕ್ಕೆ ಸುಬ್ರಹ್ಮಣ್ಯದ 'ವಲ್ಲೀಶ ಸಭಾಭವನ'ದಲ್ಲಿ ನಡೆಯಿತು.

❋ ❋ ❋

ಶ್ರೀಮತಿ ಸುಮಂಗಲಾ ಮತ್ತು ಶ್ರೀ ಗುರುರಾಜ್ ಪಳ್ಳಿಗುಡ್ಡೆ ರಾಣಿಬೆನ್ನೂರು ಇವರ ಸುಪುತ್ರ **ಚಿ। ಅಮೋಘ** ಹಾಗೂ ಬೆಂಗಳೂರಿನ ಶ್ರೀಮತಿ ಸುಧಾ ಮತ್ತು ಶ್ರೀ ವೇಣುಗೋಪಾಲ್‌ರವರ ಸುಪುತ್ರಿ **ಚಿ। ಸೌ। ನೇಹಾ**ರವರ ವಿವಾಹ ತಾರೀಕು 19–11–2023ನೇ ರವಿವಾರ ಬೆಂಗಳೂರಿನ 'ಜಸ್ಮಾದೇವಿ ಭವನ'ದಲ್ಲಿ ನೆರವೇರಿತು.

❋ ❋ ❋

ಡಾ। ಸುಬ್ರಹ್ಮಣ್ಯ ಜೋಷಿ ಮತ್ತು ಶ್ರೀಮತಿ ಜ್ಞಾನೇಶ್ವರಿ ಜೋಷಿಯವರ ಸುಪುತ್ರ **ಚಿ। ಡಾ। ವಿಹಾರ್ ಜೋಷಿ** ಹಾಗೂ ಶ್ರೀ ಗೋಪಾಲಕೃಷ್ಣ ಭಟ್ ಎಡನೀರು ಮತ್ತು ಶ್ರೀಮತಿ ಕೆ. ಗೀತಾರವರ ಸುಪುತ್ರಿ **ಚಿ। ಸೌ। ಡಾ। ಕೃಪಾ** ಇವರ ವಿವಾಹವು ತಾರೀಕು 20–11–2023ನೇ ಸೋಮವಾರ ಕಾಸರಗೋಡಿನ 'ಆಶೀರ್ವಾದ್ ಅವೆನ್ಯೂ ಸಭಾಭವನ'ದಲ್ಲಿ ನಡೆಯಿತು.



## ಉಪನಯನ

ಶ್ರೀ ವಿನಯ್ ರಾವ್ ಮತ್ತು ಶ್ರೀಮತಿ ಶಿಲ್ಪಾರವರ ಸುಪುತ್ರ **ಚಿ। ಅಭಿನವ್**ನ ಬ್ರಹ್ಮೋಪದೇಶ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾರೀಕು 19–11–2023ನೇ ರವಿವಾರ ನೆರವೇರಿತು.

NAVADURGA FINANCIALS
Estd 1998
SCAN ME TO KNOW MORE!!!

## ದ. ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದ ಬೆಳ್ವಾಯಿ ಎಂ. ದೇವಾನಂದ ಭಟ್ ಇವರಿಗೆ ಸಮ್ಮಾನ



ಬೆಳ್ವಾಯಿ ಬ್ಲೋಸಮ್ ಸ್ಕೂಲ್ ಹಾಗೂ ಲಯನ್ಸ್ ಕ್ಲಬ್ ಬೆಳ್ವಾಯಿ ಇವರ ಸಂಯೋಜನೆಯಲ್ಲಿ ಮಕ್ಕಳ ದಿನಾಚರಣೆ ಪ್ರಯುಕ್ತ 'ಮಕ್ಕಳ ಉತ್ಸವ – 2023' ಸಂಪನ್ನಗೊಂಡಿತು.

ಸಮಾರಂಭ ಹಾಗೂ ಶಾಲೆಯಲ್ಲಿ ಯಕ್ಷಗಾನ ತರಬೇತಿಯ ಉದ್ಘಾಟನೆಯನ್ನು ಬನ್ನಡ್ಕ ಎಸ್. ಕೆ. ಎಫ್. ಸಂಸ್ಥೆಯ ಸ್ಥಾಪಕಾಧ್ಯಕ್ಷರಾದ ಡಾ. ರಾಮಕೃಷ್ಣ ಆಚಾರ್ ನೆರವೇರಿಸಿ ಮಕ್ಕಳಿಗೆ ಶುಭಹಾರೈಸಿದರು. ಈ ಸಂದರ್ಭ ಯಕ್ಷಗಾನ ಗುರುಗಳು ಹಾಗೂ ದಕ್ಷಿಣ ಕನ್ನಡ ಜಿಲ್ಲಾ 'ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ' ಬೆಳ್ವಾಯಿ ಶ್ರೀ ಎಂ. ದೇವಾನಂದ ಭಟ್ ಇವರನ್ನು ಹಾಗೂ ಲಯನ್ಸ್ ಕ್ಲಬ್, ಊರ ಜನತೆ, ಬ್ಲೋಸಮ್ ಶಾಲಾ ವತಿಯಿಂದ ಸಮ್ಮಾನಿಸಲಾಯಿತು.

ವೇದಿಕೆಯಲ್ಲಿ ವಿದ್ವಾನ್ ಗಾಳಿಮನೆ ವಿನಾಯಕ ಭಟ್ ಸಮ್ಮಾನಿತರ ಬಗ್ಗೆ ಅಭಿನಂದನಾ ಭಾಷಣಗೈದರು. ಡಾ. ರಾಜಶ್ರೀ ಉಪಸ್ಥಿತರಿದ್ದ ಈ ವೇದಿಕೆಯಲ್ಲಿ ಶಾಲಾ ಸ್ಥಾಪಕಾಧ್ಯಕ್ಷರೂ ಲಯನ್ಸ್ ಕ್ಲಬ್ ಅಧ್ಯಕ್ಷರಾದ ಶ್ರೀ ಸೈಮನ್ ಮಸ್ಕರೇನ್ಹಸ್ ಅಧ್ಯಕ್ಷತೆ ವಹಿಸಿ ಮಕ್ಕಳಿಗೆ ಶುಭ ಹಾರೈಸಿ ಸೇರಿದ ಎಲ್ಲರನ್ನು ಸ್ವಾಗತಿಸಿದರು, ಮಹಾವೀರ ಪಾಂಡಿ ಕಾಂತಾವರ ಕಾರ್ಯಕ್ರಮ ನಿರೂಪಿಸಿದರು. ಲಯನ್ ಗಿಲ್ಬರ್ಟ್ ಬ್ರಿಗಾಂಜಾ ಧನ್ಯವಾದವಿತ್ತರು.

ಬಳಿಕ ಜರಗಿದ ಬೆಳ್ವಾಯಿ 'ಶ್ರೀ ಯಕ್ಷದೇವ ಸಾಧನ ಕೇಂದ್ರ'ದ ಮಕ್ಕಳಿಂದ 'ಕೃಷ್ಣ ಲೀಲೆ – ಕಂಸ ವಧೆ' ಯಕ್ಷಗಾನ ಜರಗಿತ್ತು.

## ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್ – ಪ್ರಕಟಣೆ

**ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್ ಇದರ ಯುವ ವೇದಿಕೆಯ ವತಿಯಿಂದ**
**ಸ್ಥಾನಿಕ ಬ್ರಾಹ್ಮಣ ಸಮಾಜದ ಯುವಕರಿಗೆ**

**10ನೇ ವರ್ಷದ ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯಾಟ**
**ಮತ್ತು ಮಹಿಳೆಯರಿಗೆ ತ್ರೋಬಾಲ್ ಪಂದ್ಯಾಟ**

ಪಣಂಬೂರು NMPT ಮೈದಾನದಲ್ಲಿ ದಿನಾಂಕ 28–01–2024ನೇ ಆದಿತ್ಯವಾರ ನಡೆಯಲಿದೆ. ಈ ಪಂದ್ಯಾಟದಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸುತ್ತೇವೆ.

ಪಂದ್ಯಾಟದಲ್ಲಿ ಭಾಗವಹಿಸಲು ಇಚ್ಛಿಸುವ ತಂಡಗಳು ದಿನಾಂಕ 07–01–2024ನೇ ಆದಿತ್ಯವಾರದ ಮೊದಲು ತಮ್ಮ ಹೆಸರನ್ನು **ಪ್ರವೀಣ್ (9448953331), ಸಂದೀಪ್ (9844630306)** ಇವರಲ್ಲಿ ನೋಂದಾಯಿಸಬೇಕಾಗಿ ವಿನಂತಿ.

**ಅಧ್ಯಕ್ಷರು ಮತ್ತು ಸದಸ್ಯರು, ಯುವವೇದಿಕೆ**
ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್

## ಲಕ್ಷ ಕುಂಕುಮಾರ್ಚನೆ ಸಂಪನ್ನ



ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನಾ ಸಭಾ ಇದರ ಆಶ್ರಯದಲ್ಲಿ ದಿನಾಂಕ 29–10–2023ನೇ ಭಾನುವಾರ ಮುಂಡ್ಕೂರಿನ ಮುಲ್ಲಡ್ಕ ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನದ ಸನ್ನಿಧಿಯಲ್ಲಿ ಲಕ್ಷ ಕುಂಕುಮಾರ್ಚನೆ ಸೇವೆಯು ಲೋಕಕಲ್ಯಾಣಕ್ಕಾಗಿ ಸಂಪನ್ನಗೊಂಡಿತು. ಸೇವೆಯಲ್ಲಿ ಪರಿಪಾಲನಾ ಸಭಾದ ಸದಸ್ಯರು ಹಾಗೂ ನಮ್ಮ ಸಮಾಜ ಬಾಂಧವರು, ಮಾತೆಯರು ಪಾಲ್ಗೊಂಡಿದ್ದರು. ತದನಂತರ ಧಾರ್ಮಿಕ ಸಭೆಯು ಸಂಪನ್ನಗೊಂಡಿತು. ಶ್ರೀ ಜಗದಾಭಿರಾಮರ ಅಧ್ಯಕ್ಷತೆಯಲ್ಲಿ ಪ್ರಾರಂಭಗೊಂಡ ಸಭಾಕಾರ್ಯಕ್ರಮವನ್ನು ಶ್ರೀ ವಿಜಯ ಕುಮಾರ್ ಬೆಂಗಳೂರು ಇವರು ಉದ್ಘಾಟಿಸಿದರು. ವೇದಮೂರ್ತಿ ಹೆಜಮಾಡಿ ಕೃಷ್ಣರಾಜ ಭಟ್ ಧಾರ್ಮಿಕ ಉಪನ್ಯಾಸಗೈದರು.

ನಮ್ಮ ಸಮಾಜದ ಹೆಮ್ಮೆಯ ಜ್ಯೋತಿಷ್ಯರಾದ ಕೆ. ವಿ. ರಾವ್ ಫಲಿಮಾರು ಇವರನ್ನು ಸನ್ಮಾನಿಸಲಾಯಿತು. ನಮ್ಮ ಸಮಾಜಕ್ಕೆ ಧಾರ್ಮಿಕವಾಗಿ ಮಾರ್ಗದರ್ಶನವನ್ನು ಕೇವಲ ವೃತ್ತಿಪರವಾಗಿ ನೀಡುವುದಲ್ಲದೆ ಇಂತಹ ಸಂಘಟನೆಯ ಮೂಲಕ ಕೂಡ ನೀಡುವುದು ಪ್ರತಿಯೊಬ್ಬ ವೈದಿಕರ ಕರ್ತವ್ಯ ಎಂದು ತಿಳಿದು ಸಂಘದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕರೆ ನೀಡಿದರು.

ಕಾರ್ಯದರ್ಶಿ ಶ್ರೀ ಚಿದಾನಂದ ಶ್ಯಾನುಭೋಗ್ ವಂದಿಸಿದರು. ಕೋಶಾಧಿಕಾರಿ ಶ್ರೀ ಪ್ರತಾಪ್ ರಾವ್ ನಿರೂಪಿಸಿದರು.

## ನ್ಯುಮೋನಿಯ ಮುನ್ನೆಚ್ಚರಿಕೆ...!




**ಏನು ಮಾಡಬೇಕು – ಮಾಡಬಾರದು?**

- ಸೀನುವಾಗ ಹಾಗೂ ಕೆಮ್ಮುವಾಗ ಕರ್ಚೀಫ್ ಬಳಸಬೇಕು.
- ಕೈಗಳನ್ನು ಸಾಬೂನಿನಿಂದ ತೊಳೆಯಬೇಕು.
- ಅನಗತ್ಯವಾಗಿ ಕಣ್ಣು, ಬಾಯಿ, ಮೂಗು ಮುಟ್ಟಿಕೊಳ್ಳುವುದು ಕಡಿಮೆ ಮಾಡಬೇಕು.
- ಜನಸಂದಣಿ ಪ್ರದೇಶಗಳಿಂದ ದೂರವಿರಬೇಕು.
- ಮಾಸ್ಕ್ ಧರಿಸಬೇಕು.
- ಶಂಕಿತ ವ್ಯಕ್ತಿಗಳ, ಶೀತ, ಜ್ವರ ನೆಗಡಿ ಲಕ್ಷಣಗಳಿರುವವರಿಂದ ಅಂತರ ಕಾಯ್ದುಕೊಳ್ಳಬೇಕು.
- ಸಾರ್ವಜನಿಕ ಪ್ರದೇಶಗಳಲ್ಲಿ ಉಗುಳಬಾರದು.
- ಪೌಷ್ಟಿಕಾಂಶ ಆಹಾರ ಸೇವಿಸಿ, ರೋಗನಿರೋಧಕ ಶಕ್ತಿ ಹೆಚ್ಚಿಸಿ.
- ಅನಾರೋಗ್ಯದಿಂದ ಬಳಲುವವರು ಪ್ರಯಾಣ ಕಡಿತಗೊಳಿಸಿ.
- ಸತತ 4ರಿಂದ 5 ದಿನಗಳ ಕಾಲ ಶೀತ, ನೆಗಡಿ, ಕೆಮ್ಮು, ಜ್ವರವಿದ್ದರೆ ತಪಾಸಣೆಗೆ ಒಳಗಾಗಬೇಕು.
- ಗರ್ಭಿಣಿಯರು ಸ್ವಯಂಚಿಕಿತ್ಸೆಗೆ ಒಳಗಾಗದೆ ವೈದ್ಯರನ್ನು ಭೇಟಿ ಮಾಡಬೇಕು.
- ಲಕ್ಷಣಗಳಿದ್ದರೆ ಸಮೀಪದ ಆಸ್ಪತ್ರೆಗೆ ತೆರಳಿ ಪರೀಕ್ಷೆಗೆ ಒಳಗಾಗಬೇಕು.
- ಲಕ್ಷಣಗಳಿದ್ದವರು ಮಾಸ್ಕ್ ಧರಿಸಿಕೊಂಡು, ಮನೆಯಲ್ಲಿ ಇರಬೇಕು.
- ಲಕ್ಷಣಗಳಿರುವವರು 7 ದಿನಗಳ ಕಾಲ ಪ್ರತ್ಯೇಕವಾಗಿರಬೇಕು.

**PRAVEEN KUMAR ADYAPADY**
**NOTARY & ADVOCATE**
**MANGALORE OFFICE** JANVI PLAZA, IInd FLOOR BUNTS HOSTEL, MANGALORE
**BAJPE OFFICE** OZANAM COMPLEX, IInd FLOOR CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013


ಪತ್ರಿಕೆಗೆ ಶುಭ ಬಯಸುವ–
**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
ಚಿಲಿಂಬಿ, ಮಂಗಳೂರು


*Sri Hari Adyapady*
*Proprietor*
Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE
*We undertake all types of Electrical, Plumbing and Sanitary works*

# ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ 'ದೀಪಾವಳಿ ಸಂಭ್ರಮ'



'ಸಾಂಪ್ರದಾಯಿಕ ದೀಪಾವಳಿ ಆಚರಿಸೋಣ' ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ 'ದೀಪಾವಳಿ ಸಂಭ್ರಮ'ದಲ್ಲಿ ಧಾರ್ಮಿಕ ಉಪನ್ಯಾಸ ನೀಡಿದ ವೇದಮೂರ್ತಿ ಶ್ರೀ ಕೃಷ್ಣಪ್ರಸಾದ್ ಹೆಜಮಾಡಿ ದೀಪಾವಳಿ ಆಚರಣೆಯಲ್ಲಿ ಸಂಪ್ರದಾಯಗಳು ಮಹತ್ವದ ಸ್ಥಾನವನ್ನು ಪಡೆದಿದೆ ಎಂದು ಹಲವಾರು ಪುರಾಣ ಕತೆಗಳನ್ನು ಉಲ್ಲೇಖಿಸಿ ನುಡಿದರು. ಅಜ್ಞಾನದ ಕತ್ತಲನ್ನು ನಿವಾರಿಸುವ ದೀಪದ ಬೆಳಕು ಪ್ರತಿಯೊಬ್ಬರ ಜೀವನವನ್ನು ಬೆಳಗಿಸಲಿ ಎಂದು ಹಾರೈಸಿದರು. ಗಣ್ಯರು ದೀಪ ಬೆಳಗಿಸುವ ಸಂದರ್ಭ ಶ್ರೀಮತಿ ಮಂಜುಳಾ ಮುರಳೀಧರ್, ಶ್ರೀಮತಿ ಭುವನಾ ಉದಯ ಕುಮಾರ್, ಶ್ರೀಮತಿ ಅರುಣಾ ಸೋಮಶೇಖರ್ ಪ್ರಾರ್ಥನೆ ಮತ್ತು 'ದೀಪ ಸ್ತುತಿ'ಯನ್ನು ಹಾಡಿದರು. ಬಳಿಕ ಹಲವಾರು ಮನರಂಜನಾ ಆಟಗಳನ್ನು ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಸುಮಂಗಲಾ ಪ್ರಭಾಕರ್ ನಡೆಸಿಕೊಟ್ಟರು. ಬಹುಮಾನಗಳ ಪ್ರಾಯೋಜಕರಾದ ಶ್ರೀಮತಿ ಪ್ರಭಾ ಪ್ರಭಾಕರ್, ಶ್ರೀಮತಿ ಮಂಜುಳಾ ಮುರಳೀಧರ್, ಆಕರ್ಷಕ ರಂಗೋಲಿ ರಚಿಸಿದ CA ನಾಗರಾಜ್ ಶರ್ಮ, ಶ್ರೀ ರಘುವೀರ್ ಪೆರ್ಡೂರ್, ವಿಶೇಷ ಖಾದ್ಯವನ್ನು ಪ್ರಾಯೋಜಿಸಿದ ಶ್ರೀಮತಿ ಶಾರದಾ ಪ್ರಸಾದ್, ವಿಶೇಷ ವಿದ್ಯುತ್ ಫಲಕ ಪ್ರಾಯೋಜಿಸಿದ ಶ್ರೀ ಉಮಾಕಾಂತ್ ಶರ್ಮ ಇವರನ್ನು ಗೌರವಿಸಲಾಯಿತು. ಸಾಂಪ್ರದಾಯಿಕ ಉಡುಗೆ ಸ್ಪರ್ಧೆಗಳ ಬಳಿಕ ವೈಯಕ್ತಿಕ ನೃತ್ಯಗಳು, ಶ್ರೀಮತಿ ಅನುರಾಧ ಕಿಶೋರ್ ನಿರ್ದೇಶನದ ಮಹಿಳೆಯರ, ಪುರುಷರ ನೃತ್ಯಗಳು ಸರ್ವರ ಮನವನ್ನು ರಂಜಿಸಿದವು. ಶ್ರೀ ಸಭಾ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ಪದಾಧಿಕಾರಿಗಳಾದ ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀಮತಿ ಭುವನಾ ನಾಗರಾಜ್, ಯುವವೇದಿಕೆ ಅಧ್ಯಕ್ಷರಾದ ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ್ ಕಡಬ ವ್ಯವಸ್ಥೆಯಲ್ಲಿ ಸಹಕರಿಸಿದರು. ಶ್ರೀಮತಿ ಶ್ರೀಲತಾ ಭಟ್, ಶ್ರೀಮತಿ ಕರುಣಾ ರಾವ್, ಶ್ರೀಮತಿ ಜ್ಯೋತಿ, ಶ್ರೀಮತಿ ಸುಕನ್ಯಾ ತೀರ್ಪುಗಾರರಾಗಿ ಸಹಕರಿಸಿದರು. ಬಹುಮಾನ ವಿತರಣೆ, ಸಾಮೂಹಿಕ ನೃತ್ಯ, ಸುಡುಮದ್ದು ಸಿಡಿತ, ವಿಶೇಷ ಖಾದ್ಯಗಳ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

*ಚಿತ್ರ : ಶ್ರೀ ರಘುವೀರ್ ಪೆರ್ಡೂರ್*

Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)

**ಶ್ರೀ ಸುಬ್ರಹ್ಮಣ್ಯ ಸಭಾ (ರಿ.)**
ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್
ಮಂಗಳೂರು - 575 003, ದಕ್ಷಿಣ ಕನ್ನಡ
ಇದರ
**ಸರ್ವಸದಸ್ಯರ ಮಹಾಸಭೆಯು**
ತಾ. 24-12-2023ನೇ ರವಿವಾರ ಪೂರ್ವಾಹ್ನ ಗಂಟೆ 11-00ಕ್ಕೆ
ಶ್ರೀ ಸಭಾದಲ್ಲಿ ಜರುಗಲಿರುವುದು. ಸದಸ್ಯರೆಲ್ಲರೂ ಸಭೆಯಲ್ಲಿ ಭಾಗವಹಿಸಿ,
ಸೂಕ್ತ ಸಲಹೆ-ಸೂಚನೆಗಳನ್ನು ನೀಡಬೇಕಾಗಿ ವಿನಂತಿ.

ಪತ್ರಿಕೆಗೆ ಶುಭ ಬಯಸುವ-
**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

ಪತ್ರಿಕೆಗೆ ಶುಭ ಬಯಸುವ-
ಮೊಬೈಲ್ : 9972989678
9448104174
**ರವಿಕಿರಣ್ ಕ್ರೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Muralidhara Rao Adyapadi
Proprietor
Mob : 94480 27259
99803 16434
**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

Prop. : SUDHAKAR BELLE
✆ : 9845193103/ 9481563103
**KARAN DIGITAL STUDIO**
Sadasukh Building
Nr. Postoffice, Padubidri - 574 111
Opp. Busstand
Belman
All Marriage & Other functions
Photography & Videography Available

**PREETHIKA AUTOMOBILES**
✆ 2493633
9845851573
*Wholesale & Retail Dealers in :*
*2 & 3 WHEELERS, SPARES & ACCESSORIES*
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils

ಪತ್ರಿಕೆಗೆ ಶುಭ ಬಯಸುವ-
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

**ರಾಮಾ ಅಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ



ಬಂಗಾಡಿ ಕಿಲ್ಲೂರು ಶ್ರೀ ಮೋಹನ್ ರಾವ್ ಸ್ಮರಣಾರ್ಥ ಅವರ ಧರ್ಮಪತ್ನಿ ಶ್ರೀಮತಿ ಬಿ. ಕೆ. ಉಮಾದೇವಿ, ಪುತ್ರ ಡಾ| ಸುಧೀರ್ ರಾವ್ ಬಿ. ಕೆ., ಸೊಸೆ ಡಾ| ಸುಮಂಗಲಾ ಸುಧೀರ್ ರಾವ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **50,000/-** ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಮೊಮ್ಮಕ್ಕಳಾದ ಡಾ| ಸುಶಾಂತ್ ರಾವ್, ಡಾ| ಸುಪ್ರೀತಾ ಅಜಯ್ ರಾವ್, ಶ್ರೀ ಅಜಯ್ ರಾವ್ ಮತ್ತು ಡಾ| ಚೈತ್ರಾ ಸುಶಾಂತ್ ರಾವ್ ಉಪಸ್ಥಿತರಿದ್ದರು.







Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* *Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor :* *Sri M. S. Raghunath Rao, Darbe, Puttur* *Printed at :* *Rajesh Power Press, Darbe - 574 202, Puttur, D. K.*